**ಸಿ.ಸಿ.ನಂ. 1300/2021**

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 1

ಮುಂದುವರಿದ **ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರು ಆಗಿದ್ದು , ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮೂರು ಛಾಯಚಿತ್ರಗಳನ್ನು ತೋರಿಸಲಾಗಿದ್ದು, ಅದನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ನಿಪಿ-3 ರಿಂದ 5 ರಲ್ಲಿ ಸಾಕ್ಷಿಯು ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿ: 03-08-2020 ರಂದು ಸಂಜೆ 6-00 ಗಂಟೆ ಸಮಯದಲ್ಲಿ ಲಕ್ಕವಳ್ಳಿಗೆ ಹಬ್ಬಕ್ಕೆಂದು ದಿ: 18-07-2020 ರಂದು ಹೋಗಿ ವಾಪಾಸ್ಸು ಚಾಸಾ-6 ನನ್ನ ತಾಯಿ, ಚಾಸಾ-7 ನನ್ನ ತಂಗಿಯೊಂದಿಗೆ ಕಾಯುತ್ತಿದ್ದಾಗ 1 ನೇ ಆರೋಪಿಯು ಅಲ್ಲಿಗೆ ಬಂದು ಮನೆಗೆ ಹಾಕಿದ್ದ ಬೀಗವನ್ನು ತೆಗೆದು ನಾನು ಒಳಗೆ ಹೋದಾಗ ನಾನು ಹಬ್ಬ ಮುಗಿದು ಎಷ್ಟು ದಿನಗಳ ನಂತರ ಮನೆಗೆ ಬಂದಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿಯು ನನ್ನ ಕೂದಲನ್ನು ಹಿಡಿದು ಎಳೆದಾಡಿ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿಯು ನನ್ನ ಬಲ ತೂರುಬೆರಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆಂದರೆ ಸರಿಯಲ್ಲ.1 ನೇ ಆರೋಪಿಯು ನನಗೆ ಚಾಸಾ-6 ಮತ್ತು 7 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ.

ನಾನು ಹಲ್ಲೆಯ ಸಂಬಂಧ ದಾವಣಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ದಾವಣಗೆರೆ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದು, ಆದರೆ ಅದರಲ್ಲಿ ಬರೆದ ವಿಚಾರಗಳು ನನಗೆಗೊತ್ತಿಲ್ಲ.

ದಿನಾಂಕಃ 09-08-2020 ರಂದು ಕೃತ್ಯ ನಡೆದ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಮಹಜರನ್ನು ಜರುಗಿಸಿರುತ್ತಾರೆಂದರೆ ಸಾಕ್ಷಿಯು ಮಹಜರಿಗೆ ಸಹಿ ಮಾಡಿದ್ದು, ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

1 ನೇ ಆರೋಪಿಯು ನನ್ನ ಗಂಡ ಮತ್ತು 2 ನೇ ಆರೋಪಿ ನನ್ನ ಅತ್ತೆ ಆದ ಕಾರಣ ನಾನು ಪ್ರಕರಣವನ್ನು ರಾಜಿ ಮಾಡಿಕೊಂಡಿರುತ್ತೇನೆಂದರೆ ಸರಿ. ರಾಜಿ ಮಾಡಿಕೊಂಡ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.</u>**

ಪಾಟೀ ಸವಾಲು ಇಲ್ಲ

**<u>ಮರುವಿಚಾರಣೆಃ</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**